'ಭಿತ್ತಿ'ಯನ್ನು ಓದುವ ಮೊದಲೇ, 'ಗೃಹಭಂಗ'ದಲ್ಲಿ ಅವುಗಳ ಛಾಯೆಯನ್ನು ಕಾಣುವ ಮೊದಲೇ, ಆಡಿಯೋ ಪುಸ್ತಕ ಕೇಳಿದಂತೆ ಲಲಿತಮ್ಮನವರ ಕಂಠದಲ್ಲಿ ನನಗೆ ಪರಿಚಯವಾಗಿತ್ತು. ಹಾಗಾಗಿ, ಭೈರಪ್ಪನವರು ನಾನು ಪುಸ್ತಕ ಓದುವುದನ್ನು ಕಲಿಯುವ ಮೊದಲೇ, ಅಕ್ಷರಕಲಿಕೆಯ ದಿನಗಳಲ್ಲೇ, ತನಗೆತಾನೇ ಆತ್ಮೀಯವಾಗಿ ಹತ್ತಿರವಾಗುವ ಒಂದು ಅಪೂರ್ವ ಪಾತ್ರದಂತೆ ನನ್ನ ಮನೋಲೋಕವನ್ನು ಪ್ರವೇಶಿಸಿದರು.

ಅಷ್ಟಾದರೂ, ಮುಂದೆ ನಾನೂ ಕಾದಂಬರಿಕಾರನೆಂದು ಗುರುತಿಸಿಕೊಂಡ ಮೇಲೂ, ಅವರನ್ನು ಅವರ ಇಳಿವಯಸ್ಸಿನ ತನಕ ಭೇಟಿ ಮಾಡಲೇ ಇಲ್ಲ. ಅದಕ್ಕೆ ಕಾರಣ ನನ್ನದೇ. ಒಂದು, ನನ್ನ ಸಂಕೋಚ ಸ್ವಭಾವ; ಇನ್ನೊಂದು, ಒಬ್ಬ ಲೇಖಕನನ್ನು ಭೇಟಿ ಮಾಡಿದರೆ, ಅದೂ ಭೈರಪ್ಪರಂತಹ ಹಿರಿಯರನ್ನು, ಏನು ಮಾತನಾಡಬೇಕು ಎನ್ನುವ ಗೊಂದಲ. ಒಬ್ಬ ಸೃಜನಶೀಲ ಬರಹಗಾರ ತಾನು ಹೇಳುವುದನ್ನು ಸಮರ್ಥವಾಗಿ ತನ್ನ ಕೃತಿಗಳಲ್ಲಿ ಹೇಳಿರುತ್ತಾನೆ. ಅದೇ ಅವನ ಮಾಧ್ಯಮ. ಆಶೀರ್ವಾದದಲ್ಲಿ ನಂಬಿಕೆಯಿಲ್ಲದ ನನ್ನಂಥವನು ಮತ್ತೊಬ್ಬ ಲೇಖಕನನ್ನು ಭೇಟಿ ಮಾಡಿ ಸಾಧಿಸುವುದಾದರೂ ಏನು? ನನ್ನ ಮಟ್ಟಿಗೆ ಓದು ಮತ್ತು ಬರಹಗಳೆರಡೂ ಏಕಾಂತ ಕ್ರಿಯೆ. ಅದರಲ್ಲೂ ಕಾದಂಬರಿ ಬರಹವು ಎಂತಹ ವೈಯಕ್ತಿಕ ಮತ್ತು ಒಂಟಿತನದ ಕೆಲಸವೆಂದರೆ, ಮತ್ತೊಬ್ಬ ಬರಹಗಾರನೊಂದಿಗೆ ಕೊಡು-ಕೊಳ್ಳುವ ಯಾವ ಅಗತ್ಯವೂ ಇರುವುದಿಲ್ಲ. ಒಬ್ಬ ಓದುಗನಾಗಿ ನಿಮ್ಮ ಸಾಹಿತ್ಯವನ್ನು ಮೆಚ್ಚಿದೆ ಎನ್ನಲು ಭೈರಪ್ಪನವರಿಗೆ ಇಡೀ ಕರ್ನಾಟಕವೇ ಇರುವಾಗ, ನಾನು ಹೇಳುವುದರಲ್ಲಿ ಏನು ವಿಶೇಷವಿದೆ? 2023ರಲ್ಲಿ, ಅವರ ತೊಂಬತ್ತೆರಡನೇ ವಯಸ್ಸಿನಲ್ಲಿ, ಹಾಸನದಲ್ಲಿ ನಡೆದ ಹೊಯ್ಸಳ ಸಾಹಿತ್ಯೋತ್ಸವದಲ್ಲಿ ನಾನು ಮೊದಲ ಬಾರಿಗೆ ಅವರನ್ನು ಭೇಟಿ ಮಾಡಿದೆ. ಒಂದೇ ಹೋಟೆಲಿನಲ್ಲಿ ಉಳಿದಿದ್ದೆವಾಗಿ ರಾತ್ರಿಯ ಊಟದ ಹೊತ್ತಿಗೆ ಪಕ್ಕ ಕುಳಿತು ಅವರೊಂದಿಗೆ ಮಾತನಾಡುವ ಅವಕಾಶ ಸಿಕ್ಕಿತು. ಅವರ ತಂಗಿಯ ಬಗ್ಗೆ ಅಷ್ಟೇ ನಾನು ಮಾತನಾಡಿದ್ದು. ಆ ಕ್ಷಣಕ್ಕೆ ಅವರ ಮುಖ ಅರಳಿತು. ಮಾತನಾಡಲು ಒಂದಿಷ್ಟು ವಿಚಾರವಾಯಿತು.

ಭೈರಪ್ಪನವರನ್ನು ನಾನು ಮೊದಲು ಓದಿದ್ದು ಹೈಸ್ಕೂಲಿನಲ್ಲಿ. ಆ ದಿನಗಳಲ್ಲಿ ಚಿಕ್ಕಮಗಳೂರಿನಂತಹ ಜಿಲ್ಲಾ ಕೇಂದ್ರಗಳಲ್ಲೂ ಪುಸ್ತಕಗಳೇ ಸಿಗುತ್ತಿರಲಿಲ್ಲ. ಸಾರ್ವಜನಿಕ ಗ್ರಂಥಾಲಯವು ಮನೆಯಿಂದ ನಡೆದು ಹೋಗಲು ದೂರವಿತ್ತು ಮತ್ತು ಪುಸ್ತಕದ ಅಂಗಡಿಗಳೆಂದರೆ ಲೇಖಕ್ ನೋಟ್‌ಬುಕ್ಕು, ಪೆನ್ನು, ಪೆನ್ಸಿಲ್‌ಗಳನ್ನು ಮಾರುವ ಅಂಗಡಿಗಳಷ್ಟೇ ಆಗಿದ್ದವು. ಪುಸ್ತಕಗಳು ಸಿಗುತ್ತಿರಲಿಲ್ಲ ಮತ್ತು ಅಪರೂಪಕ್ಕೆ ಸಿಕ್ಕರೂ ಜನರ ಕೊಳ್ಳುವ ಹವ್ಯಾಸವೂ ಅಪರೂಪವಾಗಿತ್ತು. ಆ ಬಗೆಯ ಪುಸ್ತಕಬರದ ದಿನಗಳಲ್ಲೇ ನನ್ನ ಮನೆಯ ಹತ್ತಿರ ಒಂದು ಸಣ್ಣ ಖಾಸಗಿ ಸರ್ಕ್ಯುಲೇಟಿಂಗ್ ಲೈಬ್ರರಿ ಶುರುವಾಯಿತು. ಒಂದು ಪುಸ್ತಕಕ್ಕೆ ಒಂದು ದಿನಕ್ಕೆ ಇಪ್ಪತ್ತು ಪೈಸೆ ಬಾಡಿಗೆ. ಅಲ್ಲಿ ನನಗೆ ಭೈರಪ್ಪ, ಚಿತ್ತಾಲ, ಕಾರಂತ, ಟಿ.ಕೆ. ರಾಮರಾವ್, ಎಂ.ಕೆ. ಇಂದಿರಾ, ನಿರಂಜನ, ಯು.ಆರ್. ಅನಂತಮೂರ್ತಿ ಎಲ್ಲರೂ ಸಿಕ್ಕರು. ಅತಿ ಹೆಚ್ಚು ಚಲಾವಣೆಯಲ್ಲಿದ್ದುದು ಭೈರಪ್ಪನವರ ಪುಸ್ತಕಗಳು. ಉಪಯೋಗಿಸದ ಕಾರ್ ಗರಾಜು, ಸ್ಟೇರ್‌ಕೇಸ್ ಮೆಟ್ಟಿಲು ಕೆಳಗಿನ ನೆರಳು, ಕಾಯಂಗಡಿಯ ಒಂದು ಮೂಲೆ – ಹೀಗೆ ಯಾರೂ ಬಳಸದ ಜಾಗಗಳಲ್ಲಿ ಗೂಡಂಗಡಿಗಳಂತೆ ಶುರುವಾದ ಪ್ರೈವೇಟ್ ಸರ್ಕ್ಯುಲೇಟಿಂಗ್ ಲೈಬ್ರರಿಗಳೇ ಆ ದಿನಗಳಲ್ಲಿ ಭೈರಪ್ಪನವರನ್ನು ಓದುಗರಿಗೆ ಮುಟ್ಟಿಸಿದ್ದು.

ಈ ವಿಚಾರವನ್ನು ನಾನು ಹೇಳಲು ಒಂದು ಕಾರಣವಿದೆ.

ನವ್ಯದ ಉತ್ತುಂಗದಲ್ಲಿ ಕನ್ನಡ ಸಾಹಿತ್ಯವು ಸಿದ್ಧಾಂತ ವ್ಯಾಧಿಯಿಂದ ಬಳಲುತ್ತಾ ಯೂನಿವರ್ಸಿಟಿಗಳ ಮಂದ ಬೆಳಕಿನ ಕೋಣೆಗಳಲ್ಲಿ ಬಂಧಿಯಾಗಿದ್ದಾಗ, ಓದುಗರಲ್ಲಿ ಸಾಹಿತ್ಯ ಪ್ರೀತಿಯನ್ನು ಉಳಿಸಿದವರಲ್ಲಿ ಎಸ್.ಎಲ್. ಭೈರಪ್ಪನವರು ಅಗ್ರಗಣ್ಯರು. ಆ ದಿನಗಳಲ್ಲಿ ಯೂನಿವರ್ಸಿಟಿಗಳಲ್ಲಿ ಮನಸ್ಥಿತಿಯು ಹೇಗಿತ್ತು ಎನ್ನುವುದಕ್ಕೆ ಯು.ಆರ್. ಅನಂತಮೂರ್ತಿಯವರ 'ಕ್ಲಿಪ್ ಜಾಯಿಂಟ್' ಕಥೆಯ ಮುಖ್ಯಪಾತ್ರ– ಅವನೊಬ್ಬ ಯೂನಿವರ್ಸಿಟಿ ಲೆಕ್ಚರರ್, ಅವನ ಒಂದು ಮಾತು ಸಾರಾಂಶದಲ್ಲಿ ಹಿಡಿಯುತ್ತದೆ– 'ಯೂನಿವರ್ಸಿಟಿಗೆ ಹೋಗಿಬರುವಾಗಲೆಲ್ಲ ದಿನವಹಿ ನೋಡುತ್ತಿದ್ದ ಹೂವು ಡಫೊಡಿಲ್ಸ್ ಎಂದು ತಿಳಿದ